ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು. ಮೀನುಗಾರಿಕೆ ಹಾಗೂ ವಸತಿ ಮಂತ್ರಿ ನಗರಾಭಿವೃದ್ಧಿ ಸಚಿವರು.)

ಅ) ಮಂಗಳೂರಿನ ನವಬಂದರಿನ ಕೊಳಚೆ ಪ್ರದೇಶದಲ್ಲಿ ಸುಮಾರು ೬೦ ಕೂಲಿಕಾರ ಕುಟುಂಬ ದವರು ಮುಲ್ಕಿಗೆ ವಲಸೆ ಹೋಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಮತ್ತು ನವ ಬಂದರಿನ ಯಾವ ಕೊಳಚೆ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಗುರುತಿಸಿರುವುದಿಲ್ಲ. ಆದ್ದರಿಂದ ನಾಗರೀಕ ಸೌಲಭ್ಯ ಒದಗಿಸಿರುವ ಬಗ್ಗೆ ಯಾವ ಕಾರ್ಯ ಕ್ರಮವನ್ನು ಕೈಗೊಂಡಿರುವುದಿಲ್ಲ.

ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯದ ಎಮ್ಮೆ ತಳಿ ಅಭಿವೃದ್ಧಿ ಕೇಂದ್ರ ಮುಚ್ಚಿದ ಬಗ್ಗೆ.

೮೧೯. ಶ್ರೀ ಎಸ್. ಆರ್. ಮೋರೆ (ಧಾರವಾಡ) ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿ ಗಳು ದಯ ವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯದಲ್ಲಿ ಇದು ಎಮ್ಮೆ ತಳಿ ಅಭಿವೃದ್ಧಿ ಸಂಗೋಪನೆ ಕೇಂದ್ರವನ್ನು ಮುಚ್ಚುತ್ತಿದ್ದಲ್ಲಿ ಅದನ್ನು ತಡೆಗಟ್ಟುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಬಂಗಾರಪ್ಪ. (ಕೃಷಿ ಮತ್ತು ತೋಟಗಾರಿಕೆ ಸಚಿವರು.)

ಅ) ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯವರು ಎಮ್ಮೆ ತಳಿ ಅಭಿವೃದ್ಧಿ ಕೇಂದ್ರವನ್ನು ದಿನಾಂಕ: 1-4-1990 ರಿಂದ ಮುಂದವರಿಸದೆ ಸ್ಥಗಿತಗೊಳಿಸಲು ನಿರ್ಧರಿಸಿರುತ್ತಾರೆ. ಆದರ ಬದ ಲಾಗಿ, '' ಸ್ಫೂರ್ತಿ '' ತಳಿ ಎಮ್ಮೆಗಳ ನ್ಯೂಟ್ರಿಷನ್ ಮತ್ತು ಮ್ಯಾನೇಜ್‌ಮೆಂಟ್ ಮೇಲೆ ಒಂದಂ ಯೋಜನೆಯನ್ನು ಕೈಗೊಳ್ಳಲು ಸೂಚಿಸಿದ್ದಾರೆ.

ಅಮೇರಿಕೆಯ ವಿಶ್ವ ವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಕೇಂದ್ರ ಸ್ಥಾಪನೆ.

೮೧೭. ಶ್ರೀ ಎಸ್. ಆರ್. ಮೋರೆ (ಧಾರವಾಡ) ಮಾನ್ಯ ಕ್ರೀಡೆ, ಶಿಕ್ಷಣ, ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಮೇರಿಕೆಯ ವಿಶ್ವ ವಿದ್ಯಾಲಯದಲ್ಲಿ ಕನ್ನಡ ವಿಭಾಗ ಒಂದನ್ನು ತೆರೆಯುವ ಕಾರ್ಯ ಯಾವ ಹಂತದಲ್ಲಿದೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವಾ ಕ್ರೀಡೆ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು).—

ಅ) ಕೇಂದ್ರ ಸರ್ಕಾರವು ವಿದೇಶಿ ವಿನಿಮಯಕ್ಕೆ ಒಪ್ಪಿಗೆ ನೀಡದೆ ಇದ್ದುದರಿಂದ ಮತ್ತೊಮ್ಮೆ ಮನರು ಪರಿಶೀಲಿಸುವಂತೆ ಕೇಂದ್ರ ಸರ್ಕಾರವನ್ನು ವಿನಂತಿಸಿಕೊಳ್ಳಲಾಗಿದೆ.

ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಾರ್ಯ ವೈಖರಿಗಳು.

೧೦೨೮ ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಶಿಕ್ಷಣ, ಯುವಜನ ಸೇವೆ ಕ್ರೀಡೆ ಕನ್ನಡ ಮತ್ತು ಸಂಸ್ಕೃತಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ಚಿತ್ರಕಲಾ ಪರಿಷತ್ ಸರ್ಕಾರದಿಂದ ಅನುದಾನ ಪಡೆಯುತ್ತಿದೆಯೇ ;

ಆ) ಹಾಗಿದ್ದಲ್ಲಿ ಕಳೆದ ೫ ವರ್ಷಗಳಲ್ಲಿ ಸರ್ಕಾರವು ಈ ಚಿತ್ರಕಲಾ ಪರಿಷತ್ತಿಗೆ ನೀಡಿದ ಅನುದಾನ ಎಷ್ಟು ?

ಇ) ಈ ಅನುದಾನವನ್ನು ಯಾವ ಕೆಲಸಗಳಿಗಾಗಿ ಖರ್ಚು ಮಾಡಲಾಗಿದೆ;

ಈ) ಈ ಚಿತ್ರಕಲಾ ಪರಿಷತ್ತಿನ ಕಾರ್ಯಗಳನ್ನು ನಿರ್ವಹಿಸಲು ಯಾವುದಾದರೂ ಸಮಿತಿಯನ್ನು ಸರ್ಕಾರ ನೇಮಿಸಿದೆಯೇ ?

ಉ) ಹಾಗಿದ್ದಲ್ಲಿ, ಯಾವ ಯಾವ ಸದಸ್ಯರು ಎಷ್ಟು ವರ್ಷಗಳಿಂದ ಈ ಪರಿಷತ್ತಿನ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ (ಪೂರ್ಣ ವಿವರ ನೀಡುವುದು)?

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ ಕ್ರೀಡೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು.)

ಅ) ಹೌದು.

ಆ) ರೂ. ೪೬,೯೨,೦೦೦—೦೦

ಇ) ಕಟ್ಟಡ ನಿರ್ಮಾಣಕ್ಕಾಗಿ, ಸಿಬ್ಬಂದಿ ವೇತನ ವೆಚ್ಚಕ್ಕಾಗಿ, ಕಲಾ ಚಟುವಟಿಕೆಗಳಿಗಾಗಿ, ಹಾಗೂ ಚಿತ್ರಕಲಾ ಮಹಾ ವಿದ್ಯಾಲಯಕ್ಕಾಗಿ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ

ರಾಜ್ಯದಲ್ಲಿರುವ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳು.

೧೧೧೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿರುವ ಒಟ್ಟು ನಗರ ಹಾಗೂ ಪಟ್ಟಣಗಳ ಸಂಖ್ಯೆಎಷ್ಟು;

(ಆ) ಇವುಗಳಲ್ಲಿ ಎಷ್ಟು ನಗರ ಹಾಗೂ ಪಟ್ಟಣಗಳಲ್ಲಿ ಕುಡಿಯುವ ನೀರಿನ ಯೋಜನೆಗಳು ಪೂರ್ತಿಯಾಗಿವೆ?

(ಇ) ಎಷ್ಟು ನಗರ ಹಾಗೂ ಪಟ್ಟಣಗಳಲ್ಲಿ ಇನ್ನೂ ಯೋಜನೆಗಳು ಪ್ರಾರಂಭವಾಗಿಲ್ಲ;

(ಈ) ಹಾಗಿದ್ದಲ್ಲಿ ಯಾವಾಗ ಪ್ರಾರಂಭವಾಗುವುದು;

(ಉ) ಈ ವರ್ಷ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಎಷ್ಟು ಹಣವನ್ನು ವಿಚುಮಾಡಲು ಸರ್ಕಾರ ಯೋಜಿಸಿದೆ;

ಶ್ರೀ ಟಿ. ಏನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು.)—

(ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ೧೭೨ ನಗರ ಪಟ್ಟಣಗಳು ಒಳಪಡುವುವು.

(ಆ) ಇವುಗಳಲ್ಲಿ ೧೭೦ ನಗರ ಪಟ್ಟಣಗಳಲ್ಲಿ ಕುಡಿಯುವ ನೀರಿನ ಯೋಜನೆಗಳು ಪೂರ್ತಿಯಾಗಿವೆ.

(ಇ) ಮಂಗಳೂರು ಜಿಲ್ಲೆಯ ಸಾಲಿಗ್ರಾಮ ಪಟ್ಟಣಕ್ಕೆ ಮಾತ್ರ ಯೋಜನೆ ಪ್ರಾರಂಭವಾಗಿಲ್ಲ.

(ಈ) ಸಾಲಿಗ್ರಾಮ ಪಟ್ಟಣಕ್ಕೆ ರೂ. ೪೫.೦೦ ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ಕಾರ್ಯವನ್ನು ಪ್ರಾರಂಭಿಸಲಾಗುವುದು.

(ಉ) ಪ್ರಸ್ತುತ ವರ್ಷ ೯೦–೯೧ರಲ್ಲಿ ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗಾಗಿ ಮಂಡಳಿಯು ರೂ. ೧೩೨೮.೦೦ ಲಕ್ಷ ವಿಚ್ರ್ಮಾಡಲು ಯೋಜಿಸಿದೆ.

ಭೂ ಸಂರಕ್ಷಣ ಯೋಜನೆಗಾಗಿ ವಿಶ್ವಬ್ಯಾಂಕಿನ ನೆರವು

೧೧೧೯. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

(ಅ) ಕಳೆದ ೧೦ ವರ್ಷದಲ್ಲಿ ರಾಜ್ಯದಲ್ಲಿ ಭೂ ಸಂರಕ್ಷಣಾ ಕಾರ್ಯಕ್ರಮಕ್ಕಾಗಿ ಸರ್ಕಾರವು ಎಷ್ಟು ಹಣ ವಿಚ್ರ್ಮಾಡಿದೆ (ಜಿಲ್ಲಾವಾರು ಹಾಗೂ ವರ್ಷವಾರು ಮಾಹಿತಿ ಒದಗಿಸುವುದು)?

(ಆ) ಈ ಕಾರ್ಯಕ್ರಮಕ್ಕಾಗಿ ಪ್ರಸಕ್ತ ವರ್ಷ ಎಷ್ಟು ಹಣವನ್ನು ವಿಚ್ರ್ಮಾಡಲು ಸರ್ಕಾರ ಉದ್ದೇಶಿಸಿದೆ?

(ಇ) ಈ ಕಾರ್ಯಕ್ರಮಗಳಿಗಾಗಿ ವಿಶ್ವ ಬ್ಯಾಂಕಿನ ಸಹಾಯವನ್ನು ಕೋರಲಾಗಿದೆಯೇ?

(ಈ) ಹಾಗಿದ್ದಲ್ಲಿ, ವಿವರಗಳನ್ನು ಒದಗಿಸುವುದು?